**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | **99(374)** |
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಬಿ.ಎಂ.ಫಾರೂಖ್ (ವಿಧಾನಸಭೆಯಿಂದ ಚುನಾಯಿತರಾದವರು)** |
| **ಉತ್ತರಿಸುವ ದಿನಾಂಕ** | : | **05.12.2023** |
| **ಉತ್ತರಿಸುವ ಸಚಿವರು** | : | **ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲಿ ಮೂಲಸೌಲಭ್ಯಗಳ ಕೊರತೆ ಈಗಿನ ಬೆಳವಣಿಗೆಯ ವೇಗಕ್ಕೆ ತಕ್ಕಂತೆ ಸಾಕಷ್ಟು ಅಭಿವೃದ್ಧಿ ಆಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬೈಕಂಪಾಡಿ ಕೈಗಾರಿಕಾ ಪ್ರದೇಶವು 1970ರ ನಿರ್ಮಾಣಗೊಂಡಿದ್ದು, ಅಂದಿನ ವಾಹನ ಓಡಾಟ, ಭಾರ ಹೊರುವ ಸಾಮರ್ಥ್ಯಕ್ಕೆ ಅನುಗುಣವಾಗಿ ವಿನ್ಯಾಸದಂತೆ ಡಾಂಬರ್ ರಸ್ತೆ ಮತ್ತು ಚರಂಡಿ, ವಿದ್ಯುತ್ ಹಾಗೂ ನೀರಿನ ಸೌಲಭ್ಯಗಳನ್ನು ನೀಡಲಾಗಿರುತ್ತದೆ. ಸದರಿ ಕೈಗಾರಿಕಾ ಪ್ರದೇಶದ ಒಟ್ಟು 17.00 ಕಿ.ಮೀ ಉದ್ದದ ಡಾಂಬರ್ ರಸ್ತೆಯಲ್ಲಿ 2015 ರಿಂದ 2021ರವರೆಗೆ ಹಂತ ಹಂತವಾಗಿ 7.00 ಕಿಮೀ. ಉದ್ದದ ಮುಖ್ಯ ರಸ್ತೆಯನ್ನು ಕಾಂಕ್ರಿಟೀಕರಣಗೊಳಿಸಿ ಉನ್ನತೀಕರಿಸಲಾಗಿದೆ.<br><br>ಬೈಕಂಪಾಡಿ ಕೈಗಾರಿಕಾ ಪ್ರದೇಶವನ್ನು ಪೂರ್ಣವಾಗಿ ಕೈಗಾರಿಕೋದ್ಯಮಿಗಳಿಗೆ ಶುದ್ಧ ಕ್ರಯಪತ್ರ ನೀಡಲಾಗಿರುತ್ತದೆ. ಕೈಗಾರಿಕೆಗಳು ಪ್ರಸ್ತುತ ಚಾಲನೆಯಲ್ಲಿರುತ್ತವೆ ಹಾಗೂ ಸದರಿ ಕೈಗಾರಿಕಾ ಪ್ರದೇಶದ ಅಂತಿಮ ದರವನ್ನು ನಿಗಧಿಪಡಿಸಲಾಗಿರುತ್ತದೆ. |
| ಆ) | ಹಾಗಿದ್ದಲ್ಲಿ, ಈ ಸಮಸ್ಯೆಯಿಂದ ಕೈಗಾರಿಕಾ ಕಾರ್ಯಚಟುವಟಿಕೆಗಳ ವೇಗ ಕುಂಠಿತವಾಗುತ್ತಿರುವುದನ್ನು ಸರ್ಕಾರ ಗಮನಿಸಿರುವುದೇ; | |
| ಇ) | ಹೌದಾದಲ್ಲಿ ಸದರಿ ಕೈಗಾರಿಕಾ ಪ್ರದೇಶ ಪ್ರಮುಖವಾಗಿ ಒಳಭಾಗದ ಕೆಲವು ರಸ್ತೆಗಳು ಸಂಪೂರ್ಣ ಹಾಳಾಗಿದ್ದು, ವಾಹನ ಸಂಚಾರಕ್ಕೆ ಯೋಗ್ಯವೇ ಆಗಿಲ್ಲದಿದ್ದರೂ ಸಹ ದುರಸ್ಥಿ ಅಭಿವೃದ್ಧಿ ಕಾರ್ಯಗಳ ಕುರಿತು ಸರ್ಕಾರ ಇನ್ನೂ ಸ್ಪಂದಿಸದೇ ಇರುವುದಕ್ಕೆ ಕಾರಣಗಳೇನು;(ವಿವರ ನೀಡುವುದು) | |

| | | |
|---|---|---|
| ಈ) | ಕೆಲವು ದಶಕಗಳ ಹಳೆಯದಾದ ಸದರಿ ಕೈಗಾರಿಕಾ ಪ್ರದೇಶಕ್ಕೆ ರಸ್ತೆ ದುರಸ್ತಿ ನಿರ್ವಹಣೆ ಅಭಿವೃದ್ಧಿಯೇ ಮೊದಲಾಗಿ ಆಧುನಿಕ ಮೂಲ ಸೌಕರ್ಯ ಕಲ್ಪಿಸುವ ವಿಚಾರವಾಗಿ ಸರ್ಕಾರದ ನಿಲುವು ಯೋಜನೆ ಗಳೇನು;(ವಿಸ್ತೃತ ವಿವರ ನೀಡುವುದು) | ಅಂತಿಮ ದರ ವನ್ನು ನಿಗಧಿಪಡಿಸಿ ಉದ್ದಿಮೆದಾರರಿಗೆ ಶುದ್ಧ ಕ್ರಯ ಪತ್ರಗಳನ್ನು ನೆರವೇರಿಸಿರುವುದರಿಂದ ಕೈಗಾರಿಕೆಗಳಿಂದ ತೆರಿಗೆ ಪಡೆಯುತ್ತಿರುವ ಸ್ಥಳೀಯ ಸಂಸ್ಥೆಗಳೇ ಸದರಿ ಕೈಗಾರಿಕಾ ಪ್ರದೇಶವನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. |
| ಉ) | ಈಗಾಗಲೇ ಯೋಜಿಸಿದ್ದಲ್ಲಿ ಒಂದು ನಿರ್ದಿಷ್ಟ ಕಾಲಮಿತಿ ಯೋಜನೆ ಹಮ್ಮಿಕೊಳ್ಳಲಾಗಿದೆಯೇ?(ಅಂಕಿ. ಅಂಶಗಳೊಂದಿಗೆ ವಿವರ ನೀಡುವುದು) | |

**ಸಂಖ್ಯೆ: ಸಿಐ 299 ಐಎಪಿ 2023**

**(ಎಂ.ಬಿ. ಪಾಟೀಲ)**
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**